ತನ್ನದೇ ಆದ ವಿಸ್ತಾರ ಕನಸುಗಳಿರುವ ವೈಷ್ಣವಿಯ ಬದುಕಿಗೆ ನನ್ನನ್ನು ಅಪವಾದಿಸಲಾಗುತ್ತಿದೆಯಾ? ಇದಕ್ಕೆ ಅವಳ ಸಹಮತವಿದೆಯಾ? ಯಾವುದೋ ಹುಡುಗಿಯ ಹಿಂದೆ ವರ್ಷಗಟ್ಟಲೆ ಅಲೆದು ತಿರಸ್ಕೃತನಾಗಿ ಬಂದವನೆಂದು ತಿಳಿದೂ ನನ್ನ ಪಕ್ಕದಲ್ಲವಳು ವಧುವಾಗಿ ನಿಲ್ಲುತ್ತಾಳಾ? ಗೊಂದಲಗಳು ಸಮರೋಪಾದಿಯಲ್ಲಿ ಎದೆಯೊಳಗೆ ಪುಟಿದೇಳತೊಡಗಿದವು.

ಆಗ ಬಂದಳು ವೈಷ್ಣವಿ...

ತಿಳಿನೀಲಿ ಬಣ್ಣದ ಸೀರೆ. ಕೊರಳ ಬಳಸಿ ಬಂದು ಸೆರಗಿನ ಇಳಿಜಾರಿನೊಳಗೆ ಮಾಯವಾಗಿರುವ ಎರಡೆಳೆಯ ಸರ. ಹೋದ ಜನ್ಮದಲ್ಲೆಂದೋ ನಾನೇ ಮುಡಿಸಿದಂತೆ, ನೇರ ನನ್ನ ನೆನಪಿಗೇ ಸಂಬಂಧಿಸಿದಂತೆ ಅತ್ಯಂತ ಪರಿಚಿತವಾದ ಪರಿಮಳ ಹೊಮ್ಮಿಸುತ್ತಿರುವ ಮುಡಿಯ ಮಲ್ಲಿಗೆ. ಸೂರ್ಯ ಮುಳುಗಿದ ಬಾನಿನಲ್ಲಿ ಎದ್ದುಬಂದ ಮಿಣುಕು ತಾರೆಯಂತಹಾ ಹಣೆಯ ಚುಕ್ಕಿ ಬಿಂದಿ, ಇವುಗಳೆಲ್ಲವೂ ಒಟ್ಟಾಗಿ ಸೃಷ್ಟಿಸಿರುವ ದಿವ್ಯ ಸೌಂದರ್ಯದ ಭಾರಕ್ಕೋ, ಯಾರನ್ನೂ ನೇರವಾಗಿ ನೋಡಲಾಗದ ಸಂಕೋಚಕ್ಕೋ ನೆಲದಮೇಲೆ ನೆಟ್ಟಿರುವ ನೋಟ...

ಇದುವರೆಗೆ ನಾನು ನೋಡದ ಹೊಸ ಚಹರೆಯೊಂದನ್ನು ಅವಳು ಧರಿಸಿ ಬಂದಿರುವಂತೆ ಭಾಸವಾಯಿತು. ಏನನ್ನೂ ಹೇಳಲಾರದವನಾಗಿ ಸುಮ್ಮನೆ ನಡೆದು ಇನೋವಾದ ಮುಂದುಗಡೆ ಚಾಲಕನ ಪಕ್ಕದ ಸೀಟನ್ನೇರಿ ಕುಳಿತುಕೊಂಡೆ. ಇಲ್ಲೇ ಏಕೆ ಕುಳಿತೆ? ಅವಳ ಕಣ್ಣಿನಿಂದ ಪಾರಾಗುವುದಕ್ಕಾ? ಖಾತ್ರಿಯಿರಲಿಲ್ಲ. ಆದರೆ ಹಾಗೆ ಕುಳಿತಮೇಲೆ ಅಮೂಲ್ಯವಾದುದೇನನ್ನೋ ಹಿಂದೆ ಬಿಟ್ಟು ಬಂದಿರುವಂತೆ ಮನಸ್ಸು ಚಡಪಡಿಸತೊಡಗಿತು. ದೇವಸ್ಥಾನ ತಲುಪುವವರೆಗೂ ಓರೆ ಕನ್ನಡಿಯಲ್ಲಿ ನನ್ನನ್ನೇ ಹುಡುಕುವವನಂತೆ ಹಿಂದಿನ ಸೀಟಿನಲ್ಲಿ ತನ್ನ ಅಮ್ಮನಿಗೊರಗಿ ಕುಳಿತಿದ್ದ ಅವಳ ಪ್ರತಿಬಿಂಬಕ್ಕಾಗಿ ಅರಸುತ್ತಲೇ ಇದ್ದೆ.

ದೇವಸ್ಥಾನ ಬಂತು. ಎಲ್ಲರೂ ಇಳಿದೆವು. ದೇವರೆದುರಲ್ಲಿ ನಿಂತು ಜಾರಲಿರುವ ಹೂವಿಗಾಗಿ ಕಾಯುತ್ತಿದ್ದಾಗ ಮನಸ್ಸೇಕೋ ಶುಭ ಸೂಚನೆಯೇ ದೊರೆಯಲೆಂದು ಪ್ರಾರ್ಥಿಸಿಕೊಂಡಿತು. ಪಕ್ಕದಲ್ಲಿ ನಿಂತ ವೈಷ್ಣವಿಯೂ ಅದನ್ನೇ ಕೇಳಿಕೊಳ್ಳುತ್ತಿದ್ದಾಳಾ? ಅಂದಾಜಿಸಲಾಗಲಿಲ್ಲ. ಎಲ್ಲರ ಹಾರೈಕೆಯಂತೆ ದೇವರ ಮುಡಿಗಿರಿಸಿದ್ದ ಹೂವಿನ ಗೊಂಚಲು ಬಲಕ್ಕೇ ಜಾರಿಬಿತ್ತು. ಎಲ್ಲರೂ ಖುಷಿಯಿಂದ 'ಹೋ' ಎಂದರು. ನಾನು ವೈಷ್ಣವಿಯನ್ನೇ ನೋಡಿದೆ. ಅವಳು ದೇವರನ್ನೇ ನೋಡುತ್ತಿದ್ದಳು.

ಮನೆಗೆ ಮರಳುತ್ತಿದ್ದಂತೆಯೇ ವೈಷ್ಣವಿ ಇಬ್ಬರು ಅಮ್ಮಂದಿರ ಜೊತೆಗೆ ಅಡುಗೆಮನೆ ಸೇರಿಕೊಂಡುಬಿಟ್ಟಳು. ಅವಳಿರುವ ಕಾರಣಕ್ಕೇ ನನ್ನದೇ ಮನೆಯ ಒಂದು ಭಾಗವಾದ ಆ ಕೋಣೆಯೊಳಗೆ ಕಾಲಿಡುವುದಕ್ಕೂ ಆಗದೆ ಮನಸ್ಸು ಹಿಂಜರಿಯತೊಡಗಿತು. ಇನ್ನು ಅವಳಾದರೂ ಎದುರೇ ಬರದೆ ಅಡಗಿದಂತೆ ಓಡಾಡಿಕೊಂಡಿದ್ದಳು. ಅಡುಗೆಮನೆಯ ಕಿಟಕಿಯಿಂದ ಕಂಡ ಅವಳು ಮುಡಿದ ಹೂ, ಕೋಣೆಯೊಳಗೆ ನಡೆದು ಬಾಗಿಲು ಎಳೆದುಕೊಂಡವಳ ಬಳೆತುಂಬಿದ ಕೈ, ಪಕ್ಕವೇ ಹಾದುಹೋದಾಗ ನನ್ನ ಕೈಗೆ ಸೋಕಿಹೋದ ಸೀರೆ ಸೆರಗು... ಹೀಗೆ ದಿನವಿಡೀ ಅವಳು ಸಂಪೂರ್ಣವಾಗಿ ಸಿಗದೇ ಒಂದು ಅನುಭೂತಿಯಂತೆ, ಚಂದದ ಕನಸಿನಂತೆ, ಚಿತ್ರವೊಂದರ ಬೇರೆಬೇರೆ ತುಣುಕುಗಳಂತೆ ಸುಳಿದಾಡಿಕೊಂಡಿದ್ದಳು. ಕೆಲವೇ ಗಂಟೆಗಳ ಕೆಳಗೆ ಒಂದಿಡೀ ರಾತ್ರೆ ಒಬ್ಬರ ಹೆಗಲಿಗೊಬ್ಬರು ಆತು ಕುಳಿತು ಬಂದ ನಮ್ಮಿಬ್ಬರ ನಡುವೆ ಇದ್ದಕ್ಕಿದ್ದಂತೆಯೇ ಸೃಷ್ಟಿಯಾದ ಈ ಸಂಕೋಚದ ಮರೆ ಅಚ್ಚರಿಯದಾಗಿತ್ತು.

ಆದರೆ ಅವಳು ಮಾತಿಗೆ ಸಿಗದೆ ದೂರ ಹೋದಷ್ಟೂ ಮನಸ್ಸಿನ ಹೊಯ್ದಾಟ ಜಾಸ್ತಿಯಾಗತೊಡಗಿತ್ತು. ನಾನು ಯೋಚಿಸುತ್ತಿರುವುದು ಸರಿಯೇ? ಇಷ್ಟು ದಿನ ನನ್ನ ಗಾಢ ಪ್ರೀತಿಯ ಇನ್ನೊಂದು ಕಥೆ ಹೇಳಿಕೊಂಡವಳೆದುರೇ ನಿಂತು, 'ನಾನು ನಿನ್ನನ್ನು ಒಪ್ಪಿದ್ದೇನೆ' ಎಂದು